# <u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 892
ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 19-09-2022
ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯದಿಂದ ರೂಪಿತವಾಗಿರುವ ಪ್ರಸಾದ - PRASAD (Piligrimage Rejuvenation and Spiritual, Heritage, Augmentation) ಯೋಜನೆಯಡಿ ತೀರ್ಥಸ್ಥಳಗಳನ್ನು ಮತ್ತು ಪಾರಂಪರಿಕ ಸ್ಥಳಗಳಲ್ಲಿ ಯಾತ್ರಿಗಳಿಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಕಲ್ಪಿಸಲು ಗುರುತಿಸಿರುವ ಮಹತ್ವದ ಸ್ಥಳಗಳು ಯಾವುವು; (ಸಂಪೂರ್ಣ ವಿವರ ನೀಡುವುದು)</td><td>ಕೇಂದ್ರ ಸರ್ಕಾರದ ಪ್ರಸಾದ್ ಯೋಜನೆಯಡಿ ಗುರುತಿಸಿರುವ ಸ್ಥಳ ವಿವರಗಳು ಕೆಳಕಂಡಂತಿವೆ:-<br>ಪ್ರಸಾದ್ ಯೋಜನೆ : 1.0<br>(Rs. In Cr)
<table>
<tr><th>Sl No.</th><th>Project name</th><th>Estimated cost</th><th>Submission Date.</th></tr>
<tr><td>1.</td><td>Chamundeshwari Temple, Mysore</td><td>47.26</td><td>16.08.2022</td></tr>
</table>
ಮೈಸೂರು ಜಿಲ್ಲೆಯ ಚಾಮುಂಡಿ ಬೆಟ್ಟದ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಕೇಂದ್ರ ಸರ್ಕಾರದ ಪ್ರಸಾದ್ ಯೋಜನೆ 1.0 ರಡಿ ಅಭಿವೃದ್ಧಿಪಡಿಸಲು ರೂ.47.26 ಕೋಟಿಗಳಿಗೆ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ಕೇಂದ್ರ ಸರ್ಕಾರದ ಅನುಮೋದನೆಗೆ ದಿನಾಂಕ: 16.08.2022ರಂದು ಸಲ್ಲಿಸಲಾಗಿರುತ್ತದೆ. ಅನುಮೋದನೆ ನಿರೀಕ್ಷಿಸಲಾಗುತ್ತಿದೆ.</td></tr>
<tr><td>ಆ)</td><td>ರಾಜ್ಯ ಸರ್ಕಾರ ಕೇಂದ್ರ ಸರ್ಕಾರದಿಂದ ಪ್ರಸಾದ ಯೋಜನೆ ಅಡಿ ಆರ್ಥಿಕ ನೆರವು ಮತ್ತು ಇತರೆ ಸಹಾಯವನ್ನು ಅಪೇಕ್ಷಿಸಿ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗಳು ಯಾವುವು ಮತ್ತು ಈ ಪ್ರಸ್ತಾವನೆಗಳ ವಿವರಗಳನ್ನು ಒಳಗೊಂಡಂತೆ ಸಂಪೂರ್ಣ ಮಾಹಿತಿ ನೀಡುವುದು;</td><td>ಪ್ರಸಾದ್ ಯೋಜನೆ 2.0:<br>ಕೇಂದ್ರ ಸರ್ಕಾರದ ಪ್ರಸಾದ್ 2.0 ಯೋಜನೆಯಡಿ ಈ ಕೆಳಕಂಡ 07 ಪ್ರವಾಸಿ ತಾಣಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಸಂಬಂಧ ಕೇಂದ್ರ ಸರ್ಕಾರಕ್ಕೆ ದಿನಾಂಕ: 08.06.2022 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಅನುಮೋದನೆ ನಿರೀಕ್ಷಿಸಲಾಗುತ್ತಿದೆ.
<table>
<tr><th>Sl. No.</th><th>Destination</th></tr>
<tr><td>1</td><td>Sri Madhwa Vana, Kunjarugiri, Udupi District</td></tr>
<tr><td>2</td><td>Papnash Temple, Bidar District</td></tr>
<tr><td>3</td><td>Jala Sangavi Temple, Bidar District</td></tr>
<tr><td>4</td><td>Sri Renuka Yellamma Temple, Saudatti, Belagavi District</td></tr>
<tr><td>5</td><td>Sri Huligemma Devi Temple, Huligi, Koppal District</td></tr>
<tr><td>6</td><td>Jharni Narasimha Swamy Temple, Bidar District Also known as Narasimha Cave Temple.</td></tr>
<tr><td>7</td><td>Shri Kshetra Ganagapur Dattatreya Temple, Kalaburagi District</td></tr>
</table></td></tr>
<tr><td>ಇ)</td><td>ರಾಜ್ಯ ಸರ್ಕಾರ ಕಳುಹಿಸಿರುವ ಪ್ರಸ್ತಾವನೆಗಳಲ್ಲಿ ಕೇಂದ್ರದಿಂದ ಇದುವರೆಗೂ ಮಂಜೂರಾಗಿರುವ ಪ್ರಸ್ತಾವನೆಗಳೆಷ್ಟು ಮತ್ತು ಒದಗಿಸಿರುವ ಆರ್ಥಿಕ ನೆರವೆಷ್ಟು; (ಸಂಪೂರ್ಣ ವಿವರ ನೀಡುವುದು)</td><td>ಪ್ರಸಾದ್ ಯೋಜನೆಯಡಿಯಲ್ಲಿ ಶ್ರೀ ಚಾಮುಂಡೇಶ್ವರಿದೇವಿ ಸನ್ನಿಧಾನ ಅಭಿವೃದ್ಧಿಗಾಗಿ ಸಲ್ಲಿಕೆಯಾಗಿರುವ ಪ್ರಸ್ತಾವನೆಯು ಅನುಮೋದನೆಯ ಹಂತದಲ್ಲಿದೆ ಹಾಗೂ ಹೆಚ್ಚುವರಿಯಾಗಿ ಸಲ್ಲಿಕೆಯಾಗಿರುವ 07 ನೂತನ ಪ್ರಸ್ತಾವನೆಗಳು ಪರಿಶೀಲನಾ ಹಂತದಲ್ಲಿವೆ.<br><br>ಕೇಂದ್ರ ಸರ್ಕಾರದಿಂದ ಇದುವರೆವಿಗೂ ಯಾವುದೇ ಪ್ರಸ್ತಾವನೆಗಳು ಮಂಜೂರಾಗಿರುವುದಿಲ್ಲ ಹಾಗೂ ಆರ್ಥಿಕ ನೆರವು ದೊರೆತಿರುವುದಿಲ್ಲ.</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ರಾಜ್ಯ ಸರ್ಕಾರ ಈ ಯೋಜನೆ ಅಡಿ ನಿಗಧಿಪಡಿಸಿರುವ ಭೌತಿಕ-ಆರ್ಥಿಕ ಗುರಿ, ಪ್ರಗತಿ ಹಾಗೂ ಸಾಧನೆಗಳ ವಿವರಗಳೇನು? (ಪೂರ್ಣ ಮಾಹಿತಿ ನೀಡುವುದು) | ಈ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರವು ಯಾವುದೇ ಆರ್ಥಿಕ ಹಾಗೂ ಭೌತಿಕ ಗುರಿ ನಿಗದಿ ಪಡಿಸಿರುವುದಿಲ್ಲ. |

**TOR 283TDV 2022**

(ಆನಂದ್ ಸಿಂಗ್)
ಪ್ರವಾಸೋದ್ಯಮ,
ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು